> ಸಮುದಾಯ ಭವನಗಳ ನಿರ್ಮಾಣ ಕಾಮಗಾರಿಯನ್ನು ಟೆಂಡರ್ ಮೂಲಕ ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಲು ಸರ್ಕಾರವು ತೀರ್ಮಾನಿಸಿದೆ. ಸಮುದಾಯ ಭವನಗಳ ನಿರ್ಮಾಣ ಕಾಮಗಾರಿಯು ತ್ವರಿತವಾಗಿ ನಡೆಯದಿರುವ ಬಗ್ಗೆ ಗಮನಕ್ಕೆ ಬಂದಿದೆ.
>
> • **ಎಚ್. ಆಂಜನೇಯ,** ಸಮಾಜ ಕಲ್ಯಾಣ ಸಚಿವ

ಕನ್ನಡಪ್ರಭ
ಮಂಗಳವಾರ 21.11.2017

ಸಣ್ ಸುದ್ದಿ

ಗ್ರಾಮೀಣ ಬ್ಯಾಂಕುಗಳಲ್ಲಿ ಸ್ಥಳೀಯರಿಗೆ ಆದ್ಯತೆ: ಕೇಂದ್ರಕ್ಕೆ ಎಸ್‌ಜಿಎಸ್ ಪತ್ರ

ಬೆಂಗಳೂರು: ಒಕ್ಕೂಟ ವ್ಯವಸ್ಥೆಯ ಆಶಯವನ್ನು ಎತ್ತಿಹಿಡಿಯುವ ನಿಟ್ಟಿನಲ್ಲಿ ಗ್ರಾಮೀಣ ಬ್ಯಾಂಕ್‌ಗಳಲ್ಲಿನ ನೇಮಕಾತಿಯಲ್ಲಿ ಸ್ಥಳೀಯರಿಗೆ ಆದ್ಯತೆ ನೀಡುವ ನಿಯಮಗಳಿಗೆ ತಿದ್ದುಪಡಿ ತರುವ ಪ್ರಕ್ರಿಯೆ ಚುರುಕುಗೊಳಿಸುವಂತೆ ಒತ್ತಾಯಿಸಿ ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದೆ. ಕೇಂದ್ರ ವಿತ್ತ ಸಚಿವ ಅರುಣ್ ಜೇಟ್ಲಿ ಹಾಗೂ ಆಡಳಿತ ಸುಧಾರಣಾ ಸಚಿವ ಡಾ. ಜಿತೇಂದ್ರ ಸಿಂಗ್ ಅವರಿಗೆ ಪತ್ರ ಬರೆಯಲಾಗಿದೆ. ಈ ವಿಚಾರವನ್ನು ಈಗಾಗಲೇ ನಿಯೋಗವು ಸೆ.7ರಂದು ತಮ್ಮನ್ನು ಭೇಟಿ ಮಾಡಿ ವಿಚಾರವನ್ನು ಚರ್ಚಿಸಲಾಗಿದ್ದು, ಈ ವರೆಗೆ ಯಾವುದೇ ರೀತಿಯಲ್ಲಿ ಸ್ಪಂದಿಸಿಲ್ಲ. ಹೀಗಾಗಿ ಮತ್ತೊಮ್ಮೆ ತಮ್ಮ ಗಮನಕ್ಕೆ ತರಲಾಗುತ್ತಿದೆ ಎಂದು ಪತ್ರದಲ್ಲಿ ತಿಳಿಸಿದೆ. ಒಕ್ಕೂಟದ ವ್ಯವಸ್ಥೆಯಲ್ಲಿ ಸಾಮಾಜಿಕ ಹಾಗೂ ಭಾಷಾ ಸಮಾನತೆ ಕಾಪಾಡಿಕೊಳ್ಳಬೇಕಿದೆ. ಈಗಾಗಲೇ ಕನ್ನಡ ಪರ ಸಂಘಟನೆಗಳು ಸ್ಥಳೀಯರಿಗೆ ಆದ್ಯತೆ ನೀಡುವ ಕುರಿತು ಅನೇಕ ಚಳವಳಿಗಳನ್ನು ನಡೆಸುತ್ತಿವೆ. ಗ್ರಾಮೀಣ ಬ್ಯಾಂಕುಗಳ ಹುದ್ದೆಗಳಿಗೆ ನೇಮಕಾತಿ ಕೋರುವ ಅಭ್ಯರ್ಥಿಗಳಲ್ಲಿ ಭಾಷಾ ಕೌಶಲ್ಯ ಹೆಚ್ಚಿಸಬೇಕಿದೆ. ಆದ್ದರಿಂದ ಸ್ಥಳೀಯರಿಗೆ ಆದ್ಯತೆ ನೀಡಬೇಕಿದೆ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಪ್ರೊ. ಎಸ್.ಜಿ. ಸಿದ್ದರಾಮಯ್ಯ ಪತ್ರದಲ್ಲಿ ತಿಳಿಸಿದ್ದಾರೆ.

ಕೆ.ಸಿ.ರೆಡ್ಡಿ ಪುತ್ಥಳಿ ಬಗ್ಗೆ ಸಿಎಂ ಜತೆ ಚರ್ಚೆ: ಸಚಿವೆ

ವಿಧಾನಪರಿಷತ್ತು: ರಾಜ್ಯದ ಮೊದಲ ಮುಖ್ಯಮಂತ್ರಿ ಕೆ.ಸಿ.ರೆಡ್ಡಿ ಅವರ ಪುತ್ಥಳಿಯನ್ನು ವಿಧಾನಸೌಧ ಆವರಣದಲ್ಲಿ ಪ್ರತಿಷ್ಠಾಪಿಸುವ ಕುರಿತು ಮುಖ್ಯಮಂತ್ರಿಯವರೊಂದಿಗೆ ಚರ್ಚಿಸುವುದಾಗಿ ಕನ್ನಡ ಮತ್ತು ಸಂಸ್ಕೃತಿ ಸಚಿವೆ ಉಮಾಶ್ರೀ ತಿಳಿಸಿದರು. ಪ್ರಶ್ನೋತ್ತರ ಅವಧಿಯಲ್ಲಿ ಕಾಂಗ್ರೆಸ್‌ನ ಜಯಮಾಲ ಪ್ರಶ್ನೆಗೆ ಉತ್ತರಿಸಿದ ಸಚಿವರು ಸುಪ್ರೀಂಕೋರ್ಟ್ ಆದೇಶದಂತೆ ಸಾರ್ವಜನಿಕ ಸ್ಥಳಗಳಲ್ಲಿ ಯಾವುದೇ ಗಣ್ಯ ವ್ಯಕ್ತಿಯ ಪ್ರತಿಮೆಗಳನ್ನು ಸ್ಥಾಪಿಸಲು ಅವಕಾಶವಿಲ್ಲ ಎಂದರು. ಸಚಿವರ ಉತ್ತರಕ್ಕೆ ಪ್ರತಿಕ್ರಿಯಿಸಿದ ಜಯಮಾಲ, ಇತ್ತೀಚೆಗೆ ವಾಲ್ಮೀಕಿ ಪ್ರತಿಮೆಯನ್ನು ವಿಧಾನಸೌಧದ ಆವರಣದಲ್ಲಿ ಪ್ರತಿಷ್ಠಾಪಿಸಲಾಗಿದ್ದು, ಇದಕ್ಕೆ ನ್ಯಾಯಾಲಯದ ಆದೇಶ ಅನ್ವಯವಾಗುವುದಿಲ್ಲವೇ? ಎಂದು ಪ್ರಶ್ನಿಸಿದಾಗ ಪ್ರತಿಪಕ್ಷ ನಾಯಕ ಕೆ.ಎಸ್. ಈಶ್ವರಪ್ಪ ಧ್ವನಿಗೂಡಿಸಿದರು. ಕೊನೆಗೆ ಸಚಿವರು ಈ ಬಗ್ಗೆ ಮುಖ್ಯಮಂತ್ರಿಗಳ ಗಮನಕ್ಕೆ ತರಲಾಗುವುದು ಎಂದು ಉತ್ತರಿಸಿದರು. ರಾಜ್ಯದ ಮೊದಲ ಮುಖ್ಯಮಂತ್ರಿ ಕೆ.ಸಿ.ರೆಡ್ಡಿ ಅವರ ಸ್ಮರಣಾರ್ಥ ಕೋಲಾರ ಜಿಲ್ಲೆಯ ಬಂಗಾರಪೇಟೆ ತಾಲೂಕಿನ ಕ್ಯಾಸಂಬಳ್ಳಿಯಲ್ಲಿ ಸ್ಮಾರಕ ನಿರ್ಮಿಸಲು ಎರಡು ಕೋಟಿ ರುಪಾಯಿ ಅನುದಾನ ಮತ್ತು 10 ಎಕರೆ ಜಮೀನು ಈಗಾಗಲೇ ನೀಡಲಾಗಿದೆ ಎಂದು ಸಚಿವೆ ಉಮಾಶ್ರೀ ಹೇಳಿದರು.

ಏರ್ಪೋರ್ಟ್ ಪಾರ್ಕಿಂಗ್ ಅಕ್ರಮ: ಸಂಬಂಧಿಸಿದವರ ವಿರುದ್ಧ ಕ್ರಮ

ವಿಧಾನಪರಿಷತ್ತು: ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಪ್ರೀಪೇಯ್ಡ್ ಟ್ಯಾಕ್ಸಿ ಸೇವೆಯ ಪಾರ್ಕಿಂಗ್ ಮತ್ತು ನಿರ್ವಹಣೆಯಲ್ಲಿ ಅಕ್ರಮ ನಡೆದಿರುವುದು ತನಿಖಾ ವರದಿಯಲ್ಲಿ ಬಹಿರಂಗಗೊಂಡಿದ್ದು, ಸಂಬಂಧಪಟ್ಟವರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗಿದೆ ಎಂದು ಸರ್ಕಾರ ತಿಳಿಸಿದೆ. ಪ್ರಶ್ನೋತ್ತರ ಅವಧಿಯಲ್ಲಿ ಟಿ.ಎ. ಶರವಣ ಕೇಳಿದ ಪ್ರಶ್ನೆಗೆ ಪ್ರವಾಸೋದ್ಯಮ ಸಚಿವ ಪ್ರಿಯಾಂಕ್ ಖರ್ಗೆ ಗೈರು ಹಿನ್ನೆಲೆಯಲ್ಲಿ ವೈದ್ಯಕೀಯ ಶಿಕ್ಷಣ ಸಚಿವ ಶರಣ ಪ್ರಕಾಶ್‌ಪಾಟೀಲ್ ಉತ್ತರ ನೀಡಿದರು. ಅಕ್ರಮ ಕುರಿತು ತನಿಖೆ ನಡೆಸಿದ ಬಳಿಕ 52890 ರು. ಅವ್ಯವಹಾರ ನಡೆದಿರುವುದು ಸಾಬೀತಾಗಿದೆ. ಈ ಹಿನ್ನೆಲೆಯಲ್ಲಿ ವ್ಯವಸ್ಥಾಪಕ ಎಸ್.ಆರ್. ಚಿಕ್ಕಮಠ, ಕೆ.ಎಂ. ಕಾಂತರಾಜ್ ಅವರನ್ನು ಅಮಾನತು ಮಾಡಲಾಗಿದೆ. ಇಬ್ಬರು ಹೊರಗುತ್ತಿಗೆ ನೌಕರರನ್ನು ವಜಾಗೊಳಿಸಲಾಗಿದೆ. ಚಿಕ್ಕಮಠ ಮತ್ತು ಕಾಂತರಾಜ್ ಅವರಿಂದ ತಲಾ 26,445 ರು. ವಸೂಲಿ ಮಾಡಲಾಗಿದೆ ಎಂದು ಹೇಳಿದರು.

ಪ್ರಯಾಣಿಕರ ಸುರಕ್ಷತೆಯ ಹಿತದೃಷ್ಟಿಯಿಂದ ಟ್ಯಾಕ್ಸಿ ಸೇವೆ ಉತ್ತಮ ಪಡಿಸಲು ಪ್ರಯಾಣಿಕರ ಆಗಮನದ ಸ್ಥಳದಲ್ಲಿ ಸೂಕ್ತ ಮಾಹಿತಿ ನೀಡಲು ನಿಗದಿತ ಸ್ಥಳದಲ್ಲಿ 15 ಮಂದಿಯನ್ನು ನಿಯೋಜಿಸಲಾಗಿದೆ. ವಿಮಾನ ನಿಲ್ದಾಣದ ಟ್ಯಾಕ್ಸಿ ಸೇವೆಯನ್ನು ಮೇಲ್ದರ್ಜೆಗೇರಿಸುವ ನಿಟ್ಟಿನಲ್ಲಿ ನಾಲ್ಕು ವರ್ಷ ಹಳೆಯದಾದ ಟ್ಯಾಕ್ಸಿಗಳನ್ನು ತೆರವುಗೊಳಿಸಿ ಹೊಸ ಟ್ಯಾಕ್ಸಿಗಳನ್ನು ಸೇರ್ಪಡೆಗೊಳಿಸುವ ಉದ್ದೇಶ ಇದೆ ಎಂದು ಸಚಿವರು ಹೇಳಿದರು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ನಗರದಲ್ಲಿ ಆಯೋಜಿಸಿದ್ದ ಮಕ್ಕಳ ದಿನಾಚರಣೆ ಕಾರ್ಯಕ್ರಮದಲ್ಲಿ ಸಂಗೀತ ಕ್ಷೇತ್ರದ ಸಾಧಕಿ ಎಂ.ನಿರೀಕ್ಷಾ ಅವರಿಗೆ ರಾಜ್ಯಮಟ್ಟದ ಪ್ರತಿಭಾ ಪುರಸ್ಕಾರ ಪ್ರಶಸ್ತಿ ಪ್ರದಾನ ಮಾಡಲಾಯಿತು. ಸಂಸದ ಪಿ.ಸಿ.ಮೋಹನ್, ಸಚಿವೆ ಉಮಾಶ್ರೀ, ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷೆ ಕೃಪಾ ಆಳ್ವಾ ಇದ್ದಾರೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ವಚನಜ್ಯೋತಿ ಬಳಗದಿಂದ ವಿಜಯನಗರದ ಅರಳಿಕಟ್ಟೆ ಮೈದಾನದಲ್ಲಿ ಆಯೋಜಿಸಿದ್ದ ಜಿಲ್ಲಾ ಕವಿಗೋಷ್ಠಿ ಉದ್ಘಾಟನಾ ಕಾರ್ಯಕ್ರಮದಲ್ಲಿ ಸಾಹಿತಿ ಬಿ.ಟಿ. ಲಲಿತಾ ನಾಯಕ್, ವಚನಜ್ಯೋತಿ ಬಳಗದ ಅಧ್ಯಕ್ಷ ಎಸ್. ಪಿನಾಕಪಾಣಿ, ಕಾದಂಬರಿಗಾರ್ತಿ ಪ್ರೇಮಾಭಟ್, ಬಿಬಿಎಂಪಿ ಸದಸ್ಯೆ ಶ್ರೀಲತಾ ಗೋಪಿನಾಥರಾಜು ಇದ್ದರು.

ಮಲೆನಾಡು ಸಾಹಿತ್ಯಾಸಕ್ತರ ಬಳಗವು ಬಸವನಗುಡಿಯಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾತುಕತೆ ಪ್ರಕಾಶನ ಪ್ರಕಟಿಸಿರುವ ಲೇಖಕ ನೆಂಪೆ ದೇವರಾಜ್ ಅವರ 'ಆದ್ರೆ ಮಳೇಲಿ ಆದವ್ನೆ ಗಂಡ' ಪುಸ್ತಕವನ್ನು ನಟ ಚೇತನ್ ಬಿಡುಗಡೆ ಮಾಡಿದರು. ಅಗ್ನಿಶ್ರೀಧರ್, ಡಾ.ಕೆ. ಪುಟ್ಟಸ್ವಾಮಿ, ಡಾ. ಈಶ್ವರ್, ಇ.ವಿ.ಸತ್ಯನಾರಾಯಣ, ಕೆ.ಟಿ.ನಾಗರಾಜ್, ಅನಿಲ್ ಹೊಸಕೊಪ್ಪ ಇದ್ದರು.

ಮಕ್ಕಳಿಂದ ಅತಿಯಾದ ಅಶ್ಲೀಲ ಚಿತ್ರ ವೀಕ್ಷಣೆ: ಜಗ್ಗಿ

ಶೇ.70ರಷ್ಟು ಅಂತರ್ಜಾಲ ಅಶ್ಲೀಲ ವೆಬ್‌ಸೈಟ್ ವೀಕ್ಷಣೆಗೆ ಬಳಕೆ | ಜಾಗೃತೆ ವಹಿಸುವಂತೆ ಪೋಷಕರಿಗೆ ಸಲಹೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಶೈಕ್ಷಣಿಕವಾಗಿ ನೆರವಾಗಲೆಂದು ನೀಡಿರುವ ಅಂತರ್ಜಾಲದಲ್ಲಿ ಮಕ್ಕಳು ಅಶ್ಲೀಲ ಚಿತ್ರಗಳ ವೀಕ್ಷಣೆ ಮಾಡುತ್ತಿರುವುದು ಕಳವಳಕಾರಿಯಾಗಿದ್ದು, ಪೋಷಕರು ಮಕ್ಕಳ ನಡವಳಿಕೆ ಬಗ್ಗೆ ಎಚ್ಚರವಹಿಸುವ ಅಗತ್ಯವಿದೆ ಎಂದು ಈಶಾ ಫೌಂಡೇಷನ್ ಸಂಸ್ಥಾಪಕ ಜಗ್ಗಿ ವಾಸುದೇವ್ ಎಚ್ಚರಿಸಿದ್ದಾರೆ.

ನಗರದ ಗೋಕುಲ ಶಿಕ್ಷಣ ಪ್ರತಿಷ್ಠಾನ ನೂತನವಾಗಿ ನಿರ್ಮಾಣ ಮಾಡಿರುವ 'ರಾಮಯ್ಯ ಇಂಡಿಕ್ ಸ್ಪೆಷಾಲಿಟಿ ಆಯುರ್ವೇದ ರೆಸ್ಟೋರೇಷನ್ ಆಸ್ಪತ್ರೆ'ಯ ಲೋಕಾರ್ಪಣೆ ಬಳಿಕ ರಾಮಯ್ಯ ತಾಂತ್ರಿಕ ಮಹಾವಿಶ್ವದ್ಯಾಲಯದಲ್ಲಿ ಹಮ್ಮಿಕೊಂಡಿದ್ದ ಪ್ರಾಧ್ಯಾಪಕರು ಮತ್ತು ವಿದ್ಯಾರ್ಥಿಗಳೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಅವರು ಪಾಲ್ಗೊಂಡಿದ್ದರು. ದೇಶದಲ್ಲಿ ಪ್ರಸ್ತುತ ಶೇ.70ರಷ್ಟು ಅಂತರ್ಜಾಲವು ಅಶ್ಲೀಲ ವೆಬ್‌ಸೈಗಳ ವೀಕ್ಷಣೆಗೆ ಬಳಕೆಯಾಗುತ್ತಿದ್ದು ಹದಿನೈದಕ್ಕಿಂತ ಕಡಿಮೆ ವಯಸ್ಸಿನವರು ಹೆಚ್ಚು ಪ್ರಮಾಣದಲ್ಲಿರುವುದು ಆತಂಕದ ವಿಷಯವಾಗಿದೆ. ಸಣ್ಣ ಮಕ್ಕಳು ಅಶ್ಲೀಲ ಚಿತ್ರಗಳ ವೀಕ್ಷಣೆ ಮಾಡುತ್ತಿರುವುದು ಅತ್ಯಂತ ಆಘಾತಕಾರಿಯಾಗಿದ್ದು, ಈ ಬಗ್ಗೆ ಪೋಷಕರು ಜಾಗೃತಿ ವಹಿಸಬೇಕು ಎಂದರು.

ಎಂಜಿನಿಯರಿಂಗ್ 5 ವರ್ಷಕ್ಕೆ ಹೆಚ್ಚಿಸಿ: ಪ್ರತಿ ವರ್ಷ ಸುಮಾರು ಅರ್ಧ ಮಿಲಿಯನ್‌ನಷ್ಟು ಎಂಜಿನಿಯರ್‌ಗಳು ಕಾಲೇಜಿನಿಂದ ಹೊರ ಬರುತ್ತಿದ್ದಾರೆ. ಆದರೆ, ಅವರೆಲ್ಲರಿಗೂ ಸೂಕ್ತ ರೀತಿಯ ಉದ್ಯೋಗ ಅವಕಾಶಗಳು ಸಿಗುತ್ತಿಲ್ಲ. ಕೆಲ ಸಂದರ್ಭಗಳಲ್ಲಿ ಉದ್ಯೋಗ ಲಭ್ಯವಾದರೂ, ಕಾರ್ಯಕ್ಷಮತೆಯಿರುವುದಿಲ್ಲ. ಆದ್ದರಿಂದ ಈಗಿರುವ ನಾಲ್ಕು ವರ್ಷದ ಎಂಜಿನಿಯರಿಂಗ್ ಕೋರ್ಸ್‌ನ್ನು ಐದು ವರ್ಷಕ್ಕೆ ಹೆಚ್ಚಿಸಬೇಕು ಎಂದು ಸಲಹೆ ನೀಡಿದರು.

ದೇಶಾದ್ಯಂತ ವಿಭಿನ್ನವಾದಂತಹ ಜನರಿದ್ದೂ, ಎಲ್ಲರಿಗೂ ಒಂದೇ ರೀತಿಯ ಶಿಕ್ಷಣ ನೀಡಲು ಕಷ್ಟಸಾಧ್ಯ. ಶೇ. 66ರಷ್ಟು ಗ್ರಾಮೀಣ ಭಾಗದ ಜನ ಭೂರಹಿತರಾಗಿದ್ದಾರೆ. ಅವರು ತಮ್ಮ ಮಕ್ಕಳಿಗೆ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾಭ್ಯಾಸ ಕೊಡಿಸಲು ಸಾಧ್ಯವಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಪೋಷಕರು ಸಾಧ್ಯವಾದಷ್ಟು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಲು ಗಮನ ಹರಿಸಬೇಕು ಎಂದರು. ಪ್ರಸ್ತುತದ ಶಿಕ್ಷಣ ಪದ್ಧತಿಯಲ್ಲಿ ಮಕ್ಕಳು ಎಷ್ಟು ಪ್ರಮಾಣದಲ್ಲಿ ಜ್ಞಾನಾರ್ಜನೆ ಪಡೆದಿದ್ದಾರೆ ಎನ್ನುವುದಕ್ಕಿಂತ ಎಷ್ಟು ಅಂಕ ಗಳಿಸಿದ್ದಾರೆ ಎಂಬ ಪ್ರಶ್ನೆಗಳು ಬರುತ್ತಿದೆ. ಇದರಿಂದ ಯುವ ಸಮುದಾಯ ಅಂಕ ಗಳಿಸುವಲ್ಲಿ ತಲ್ಲೀನರಾಗಿದ್ದು, ಜ್ಞಾನಾರ್ಜನೆಯತ್ತ ಗಮನಿಸುತ್ತಿಲ್ಲ. ಪಠ್ಯದಲ್ಲಿ ಹೆಚ್ಚು ಅಂಕ ಗಳಿಸಿದವರು ಮಾತ್ರ ಬುದ್ಧಿವಂತರು ಎನ್ನುವ ಸತ್ಯವಲ್ಲ. ಹೊರ ಜಗತ್ತಿನ ಅನುಭವವೇ ಹೆಚ್ಚು ಕಲಿಯಲು ಸಹಕಾರಿ ಎಂದರು.

ಗೋಕುಲ ಶಿಕ್ಷಣ ಪ್ರತಿಷ್ಠಾನ ಅಧ್ಯಕ್ಷ ಡಾ.ಎಂ.ಆರ್. ಜಯರಾಂ, ಗೋಕುಲ ಶಿಕ್ಷಣ ಪ್ರತಿಷ್ಠಾನ (ವೈದ್ಯಕೀಯ) ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಡಿ.ವಿ. ಗುರುಪ್ರಸಾದ್, ರಾಮಯ್ಯ ಇಂಡಿಕ್ ಸ್ಪೆಷಾಲಿಟಿ ಆಯುರ್ವೇದ ರೆಸ್ಟೋರೇಷನ್ ಆಸ್ಪತ್ರೆ ನಿರ್ದೇಶಕ ಡಾ.ಜಿ.ಜಿ. ಗಂಗಾಧರನ್ ಉಪಸ್ಥಿತರಿದ್ದರು.

RALLY FOR RIVERS
RallyforRivers.org
RallyforRivers

ಗೋಕುಲ ಶಿಕ್ಷಣ ಪ್ರತಿಷ್ಠಾನ ನೂತನವಾಗಿ ನಿರ್ಮಾಣ ಮಾಡಿರುವ ರಾಮಯ್ಯ ಇಂಡಿಕ್ ಸ್ಪೆಷಾಲಿಟಿ ಆಯುರ್ವೇದ ರೆಸ್ಟೋರೇಷನ್ ಆಸ್ಪತ್ರೆಯ ಲೋಕಾರ್ಪಣೆ ಬಳಿಕ ಗಿಡಕ್ಕೆ ನೀರು ಹಾಕುವ ಮೂಲಕ ರಾಮಯ್ಯ ತಾಂತ್ರಿಕ ಮಹಾವಿಶ್ವದ್ಯಾಲಯದಲ್ಲಿ ಹಮ್ಮಿಕೊಂಡಿದ್ದ ಸಂವಾದ ಉದ್ಘಾಟಿಸಿದರು. ಗೋಕುಲ ಶಿಕ್ಷಣ ಪ್ರತಿಷ್ಠಾನ ಅಧ್ಯಕ್ಷ ಡಾ.ಎಂ.ಆರ್. ಜಯರಾಂ ಮತ್ತಿತರರು ಉಪಸ್ಥಿತರಿದ್ದರು.

> **ಖಾಸಗಿ ಆಸ್ಪತ್ರೆಗಳಲ್ಲಿ ಅಲೋಪತಿ ಜತೆಗೆ ಹೋಮಿಯೋಪತಿ ವೈದ್ಯಕೀಯ ಚಿಕಿತ್ಸಾ ವ್ಯವಸ್ಥೆಯೂ ನೀಡಬೇಕಾಗಿದೆ. ಇದೇ ಮೊದಲ ಬಾರಿ ಖಾಸಗಿ ಆಸ್ಪತ್ರೆಯಲ್ಲಿ ಹೋಮಿಯೋಪತಿ ವೈದ್ಯ ಚಿಕಿತ್ಸಾ ಪದ್ಧತಿ ಪರಿಚಯಿಸುತ್ತಿದ್ದು, ಬಡವರಿಗೆ ಕೈಗೆಟಕುವ ದರದಲ್ಲಿ ಚಿಕಿತ್ಸೆ ದೊರೆಯಲಿದೆ.**
>
> • **ಡಾ.ಡಿ.ವಿ.ಗುರುಪ್ರಸಾದ್,**
> ಗೋಕುಲ ಶಿಕ್ಷಣ ಪ್ರತಿಷ್ಠಾನ
> (ವೈದ್ಯಕೀಯ) ಸಿಇಒ

ರಾಮಚಂದ್ರಾಪುರ ಮಠದ ಭಕ್ತರ ಮೇಲಿನ ಎಫ್‌ಐಆರ್‌ಗೆ ತಡೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಸಾಮಾಜಿಕ ಕಾರ್ಯಕರ್ತೆ ಭೀಮಪುತ್ರಿ ರೇವತಿರಾಜ್ ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ಜಾತಿ ನಿಂದನೆ ಹಾಗೂ ಚಾರಿತ್ರ್ಯಹರಣ ಮಾಡುವಂತಹ ಬರಹಗಳನ್ನು ಪ್ರಕಟಿಸಿದ ಆರೋಪ ಸಂಬಂಧ ರಾಮಚಂದ್ರಾಪುರ ಮಠದ ರಾಘವೇಶ್ವರ ಸ್ವಾಮೀಜಿ ಅವರ ಐವರು ಭಕ್ತರ ವಿರುದ್ಧ ಗಿರಿನಗರ ಠಾಣೆಯಲ್ಲಿ ದಾಖಲಾಗಿದ್ದ ಎಫ್‌ಐಆರ್‌ಗೆ ಹೈಕೋರ್ಟ್ ಸೋಮವಾರ ಮಧ್ಯಂತರ ತಡೆಯಾಜ್ಞೆ ನೀಡಿದೆ.

ಪ್ರಕರಣದ ಸಂಬಂಧ ತಮ್ಮ ವಿರುದ್ಧ ಗಿರಿನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸುವಂತೆ ಕೋರಿ ಸಾಗರ ತಾಲ್ಲೂಕಿನ ಹೆಗ್ಗೆಕೊಪ್ಪ ಗ್ರಾಮದ ಪ್ರಶಾಂತ್ ಜಿ. ಹೆಗಡೆ, ಕುಂದಾಪುರ ತಾಲೂಕು ಕಂಬದಕೋಣೆಯ ಎಂ. ಮಂಜುನಾಥ ಭಟ್, ಸಿದ್ದಾಪುರ ತಾಲೂಕಿನ ಇಟ್ಟಗಿಯ ಪ್ರಕಾಶ್ ಸೀತಾರಾಮ ಭಟ್, ಸುಳ್ಯ ತಾಲೂಕಿನ ಬಾಳಿಲ ಗ್ರಾಮದ ಕೆ. ರಾಮಪ್ರಸಾದ್ ಮತ್ತು ಹೊನ್ನಾವರ ತಾಲೂಕಿನ ಕುಂಬಾರಮಕ್ಕಿ ಗ್ರಾಮದ ಗಣಪತಿ ಹೆಗಡೆ ಹೈಕೋರ್ಟ್‌ಗೆ ತಕರಾರು ಅರ್ಜಿ ಸಲ್ಲಿಸಿದ್ದರು.

ಸೋಮವಾರ ಈ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ ಅವರಿದ್ದ ಏಕಸದಸ್ಯ ನ್ಯಾಯಪೀಠ ಅರ್ಜಿದಾರರ ವಿರುದ್ಧದ ಎಫ್‌ಐಆರ್‌ಗೆ ತಡೆಯಾಜ್ಞೆ ನೀಡಿತು. ಅಲ್ಲದೆ, ಅರ್ಜಿ ಕುರಿತು ಉತ್ತರಿಸುವಂತೆ ಪ್ರತಿವಾದಿಗಳಾದ ಗಿರಿನಗರ ಪೊಲೀಸ್ ಇನ್‌ಸ್ಪೆಕ್ಟರ್, ಬಹುಜನ ದಲಿತ ಸಂಘರ್ಷ ಸಮಿತಿ ಸಂಸ್ಥಾಪಕ ಅಧ್ಯಕ್ಷ ಆರ್.ಎಂ.ಎನ್. ರಮೇಶ್ ಹಾಗೂ ಭೀಮಪುತ್ರಿ ರೇವತಿ ಅವರಿಗೆ ನೋಟಿಸ್ ಜಾರಿ ಮಾಡಿತು.

ಕನ್ಯಾ ಸಂಸ್ಕಾರ ವಿವಾದ: ರಾಘವೇಶ್ವರ ಭಾರತೀಸ್ವಾಮೀಜಿ ಅವರು ಬೆಂಗಳೂರಿನ ಗಿರಿನಗರದಲ್ಲಿರುವ ರಾಮಚಂದ್ರಾಪುರ ಶಾಖಾಮಠದಲ್ಲಿ 2017ರ ಜುಲೈ 20ರಂದು ಕನ್ಯಾ ಸಂಸ್ಕಾರ ನಡೆಸಿದ್ದರು. ಇದನ್ನು ವಿರೋಧಿಸಿ ಬಹುಜನ ದಲಿತ ಸಂಘರ್ಷ ಸಮಿತಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಭೀಮಪುತ್ರಿ ರೇವತಿ ರಾಜ್ ಹಾಗೂ ಸಮಿತಿಯ ಇತರೆ ಕಾರ್ಯಕರ್ತ ಮಠದ ಮುಂದೆ ಪ್ರತಿಭಟನೆ ನಡೆಸಿದ್ದರು.

ತದನಂತರ ರೇವತಿರಾಜ್ ಅವರು 2017ರ ಸೆಪ್ಟೆಂಬರ್ 20ರಂದು ರಾಜ್ಯ ಗಿರಿನಗರ ಪೊಲೀಸ್ ಠಾಣೆಯಲ್ಲಿ ಒಂಬತ್ತು ಜನರ ವಿರುದ್ಧ ದೂರು ನೀಡಿದ್ದರು. ಒಂಬತ್ತು ಜನರ ಪೈಕಿ ಐವರು ಅರ್ಜಿದಾರರು ಸೇರಿದ್ದಾರೆ. ಪ್ರಶಾಂತ್ ಜಿ. ಹೆಗಡೆ ಹಾಗೂ ಇತರೆ ನಾಲ್ವರು ಅರ್ಜಿದಾರರು ಸೇರಿದಂತೆ ಒಂಬತ್ತು ಜನ ತಮ್ಮ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಜಾತಿ ನಿಂದನೆ ಹಾಗೂ ನನ್ನ ಚಾರಿತ್ರ್ಯಹರಣ ಮಡುವಂತಹ ಬರಹ ಪ್ರಕಟಿದ್ದಾರೆ. ಹಾಗೆಯೇ, ತಮಗೆ ಜೀವ ಬೆದರಿಕೆಯನ್ನೂ ಒಡ್ಡಿದ್ದಾರೆ ಎಂದು ರೇವತಿರಾಜ್ ದೂರಿದ್ದರು. ಪೊಲೀಸರು ಅರ್ಜಿದಾರರ ವಿರುದ್ಧ ಎಫ್‌ಐಆರ್ ದಾಖಲಿಸಿದ್ದರು.

- ಭೀಮಪುತ್ರಿ ರೇವತಿರಾಜ್ ಜಾತಿನಿಂದನೆ, ಚಾರಿತ್ರ್ಯಹರಣ ಪ್ರಕರಣ
- ಗಿರಿನಗರ ಠಾಣೆಯಲ್ಲಿ ದಾಖಲಾಗಿದ್ದ ಎಫ್‌ಐಆರ್

ಅಮೆರಿಕ ವಿವಿ ಜತೆ ನಗರದ ಸೇಂಟ್ ಜೋಸೆಫ್ ಇನ್‌ಸ್ಟಿಟ್ಯೂಟ್ ಸಂವಾದ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಅಮೆರಿಕದ ಸಿಯಾಟೆಲ್ ವಿಶ್ವವಿದ್ಯಾಲಯದ ಆಲ್ಬರ್ಸ್ ಸ್ಕೂಲ್ ಆಫ್ ಬ್ಯುಸಿನೆಸ್ ಆ್ಯಂಡ್ ಎಕಾನಾಮಿಕ್ಸ್ ಸಂಸ್ಥೆಯೊಂದಿಗೆ ನಗರದ ಸೇಂಟ್ ಜೋಸೆಫ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಜಂಟಿಯಾಗಿ ಪರಿಸರಕ್ಕೆ ಸಂಬಂಧಿಸಿ ಸಂವಾದ ನಡೆಸಲಾಯಿತು.

ಪರಿಸರ ಮಾಲಿನ್ಯ ಹಾಗೂ ಪುನರ್ ನವೀಕರಿಸಬಹುದಾದ ಇಂಧನಕ್ಕೆ ಸಂಬಂಧಿಸಂತೆ ನಡೆದ ವಿಡಿಯೋ ಕಾನ್ಫರೆನ್ಸ್ ಮೂಲಕ ಸಂವಾದದಲ್ಲಿ ಯುರೋಪಿನ್ ತಂಡ ವಿಜೇತರಾಗಿ ಪ್ರಕಟಿಸಲಾಯಿತು. ಸೇಂಟ್ ಜೋಸೆಫ್ ವಿವಿಯ ಮೂವರು ವಿದ್ಯಾರ್ಥಿಗಳ, ಜರ್ಮನಿಯ ಮೂರು ವಿದ್ಯಾರ್ಥಿಗಳು ತಮ್ಮ ವಾದ ಪ್ರತಿಪಾದಿಸಿದರು. ಎರಡೂ ತಂಡಗಳಲ್ಲಿ ಯುರೋಪಿನ ತಂಡವನ್ನು ವಿಜೇತರನ್ನಾಗಿ ಘೋಷಿಸಲಾಯಿತು. ಡಾ. ಸಿಪ್ರಿಯನ್ ಟೆಲ್ಲಿಸ್, ವಿಶ್ವನಾಥನ್, ಆಶೀಶ್ ನಿಚಾನಿ ಹಾಗೂ ರೋಶನ್ ಡಿ'ಸಿಲ್ವ ಅವರು ಆಯ್ಕೆದಾರರಾಗಿ ಕಾರ್ಯನಿರ್ವಹಿಸಿ ಆಯ್ಕೆ ತಂಡದ ಸದಸ್ಯರಾಗಿದ್ದರು.

ಕಸಾಪ ಈಗ ಹಣ ಉಳ್ಳವರ ಗದ್ದುಗೆ

ಸಾಹಿತಿ, ಕವಿ ಎಂದರಷ್ಟೇ ಸಾಕು. ದಲಿತ, ಬಂಡಾಯ, ನವ್ಯ ಎಂದೆಲ್ಲ ಬೇಕಿಲ್ಲ: ಸಿದ್ದಲಿಂಗಯ್ಯ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಲಕ್ಷಾಂತರ ಮತದಾರರನ್ನು ಹೊಂದಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಗದ್ದುಗೆಯನ್ನು ಈಗ ಹಣ ಉಳ್ಳವರು ಹಿಡಿಯುವಂತಾಗಿದೆ ಎಂದು ಕಸಾಪ ಮಾಜಿ ಅಧ್ಯಕ್ಷ ಪ್ರೊ.ಜಿ.ಎಸ್. ಸಿದ್ದಲಿಂಗಯ್ಯ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತಿನ ಶ್ರೀ ಕೃಷ್ಣರಾಜ ಪರಿಷನ್ಮಂದಿರದಲ್ಲಿ ಸೋಮವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕಸಾಪ ಶತಮಾನೋತ್ಸವ ದತ್ತಿ ಪ್ರಶಸ್ತಿ ಸ್ವೀಕರಿಸಿ ಅವರು ಮಾತನಾಡಿದರು.

ಕನ್ನಡ ಸಾಹಿತ್ಯ ಪರಿಷತ್‌ನ ಕನಸಗಳನ್ನು ನನಸು ಮಾಡಲು ಈವರೆಗೂ ಸುಮಾರು 25 ಅಧ್ಯಕ್ಷರು ಯಜಮಾನ್ಯ ವಹಿಸಿಕೊಂಡಿದ್ದಾರೆ, ಕನ್ನಡ ಸಾಹಿತ್ಯ ಪರಿಷತ್ತು ಕೇವಲ ನಾಲ್ಕು ಗೋಡೆಗಳ ಕಟ್ಟಡವಲ್ಲ, ಸಾಹಿತ್ಯ ಸಂಸ್ಕೃತಿಗೆ ವಿಶೇಷ ಕೊಡುಗೆ ನೀಡಿದ ಮಹಾನ್ ವ್ಯಕ್ತಿಗಳಿದ್ದ ಕ್ಷೇತ್ರ. ಅಂತಹ ಸಂಸ್ಥೆಗೆ ನೂರಾರು ಕನಸುಗಳಿದ್ದು, ಅವುಗಳನ್ನು ನನಸು ಮಾಡಬೇಕಾಗಿರುವುದು ಕನ್ನಡಿಗರ ಕೆಲಸವಾಗಿದೆ ಎಂದರು ಹೇಳಿದರು.

ಸಾಹಿತಿ, ಕವಿ ಎಂದರಷ್ಟೇ ಸಾಕು. ದಲಿತ, ಬಂಡಾಯ, ನವ್ಯ ಎಂದೆಲ್ಲ ಗುಣವಾಚಕಗಳ ಅಗತ್ಯವಿಲ್ಲ. ಇನ್ನು ಹೆಣ್ಣು ಸಾಹಿತಿ, ಗಂಡು ಸಾಹಿತಿ ಎಂದು ಕರೆಯುವುದು ಗುಣವನ್ನು ಕಡಿಮೆ ಮಾಡುವಂತಹವು. ಹೀಗಾಗಿ ಕೇವಲ ಸಾಹಿತಿ, ಕವಿ ಎಂದರಷ್ಟೇ ಸಾಕು ಎಂದು ಸಲಹೆ ನೀಡಿದರು.

ಕಸಾಪ ಅಧ್ಯಕ್ಷ ಡಾ. ಮನು ಬಳಿಗಾರ್ ಮಾತನಾಡಿ, ಭಾಷೆ ಮತ್ತು ಸಂಸ್ಕೃತಿ ಕಟ್ಟಿ ಬೆಳೆಸುವ ಕನ್ನಡ ಸಾಹಿತ್ಯ ಪರಿಷತ್ತು ಅವುಗಳ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ಕೆಲಸವನ್ನು ಮಾಡಿದೆ. ಪರಿಷತ್ತಿನಲ್ಲಿ ನೀಡಲಾಗುವ ಪ್ರಶಸ್ತಿ ತನ್ನದೇ ಆದ ಮಹತ್ವ ಪಡೆದುಕೊಂಡಿದ್ದು, ಯಾವುದೇ ಲಾಬಿ ಇಲ್ಲದೆ ನೀಡುವ ಪ್ರಶಸ್ತಿ ಎಂದರೆ ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಶಸ್ತಿಗಳು ಎಂದರು. ಕಸಾಪ ಗೌರವ ಕಾರ್ಯದರ್ಶಿ ವ.ಚ. ಚನ್ನೇಗೌಡ, ಗೌರವ ಕೋಶಾಧ್ಯಕ್ಷ ಪಿ. ಮಲ್ಲಿಕಾರ್ಜುನಪ್ಪ ಮೊದಲಾದವರು ಉಪಸ್ಥಿತರಿದ್ದರು.

ಕನ್ನಡ ಸಾಹಿತ್ಯ ಪರಿ

ಕನ್ನಡ ಸಾಹಿತ್ಯ ಪರಿಷತ್ತಿನನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕಸಾಪ ಶತಮಾನೋತ್ಸವ ದತ್ತಿ ಪ್ರಶಸ್ತಿಯನ್ನು ಪ್ರೊ.ಜಿ.ಎಸ್.ಸಿದ್ದಲಿಂಗಯ್ಯ ಅವರಿಗೆ ನೀಡಿ ಗೌರವಿಸಲಾಯಿತು. ಕಸಾಪ ಅಧ್ಯಕ್ಷ ಡಾ. ಮನುಬಳಿಗಾರ್, ಗೌರವ ಕಾರ್ಯದರ್ಶಿ ವ.ಚ. ಚನ್ನೇಗೌಡ, ಗೌರವ ಕೋಶಾಧ್ಯಕ್ಷ ಪಿ. ಮಲ್ಲಿಕಾರ್ಜುನಪ್ಪ ಉಪಸ್ಥಿತರಿದ್ದರು.

ನಗರ ಕಾರ್ಯಕ್ರಮಗಳು

- **ನಂಜನಗೂಡು ರಾಘವೇಂದ್ರಸ್ವಾಮಿ ಮಠ:** ವಿದ್ವಾನ್ ವೆಂಕಟನರಸಿಂಹಚಾರ್ಯರಿಂದ 'ವಿಷ್ಣು ಪುರಾಣ' ಕುರಿತು ಪ್ರವಚನ, ಸ್ಥಳ: ಮಠದ ಸಭಾಂಗಣ, ಜಯನಗರ, 5ನೇ ಬಡಾವಣೆ– ಬೆಳಗ್ಗೆ 6.45.
- **ಪರಮಾರ್ಥ ವಿಚಾರ ಸಂಘ:** ಡಾ.ಕೆ.ಜಿ.ಸುಬ್ರಾಯ ಶರ್ಮಾರಿಂದ 'ಅನೈಕಾಂತಿಕಂ' ಕುರಿತು ಉಪನ್ಯಾಸ, ಸ್ಥಳ: ಆಧ್ಯಾತ್ಮ ಮಂದಿರ, ನ್ಯಾಷನಲ್ ಹೈಸ್ಕೂಲ್ ರಸ್ತೆ, ವಿಶ್ವೇಶ್ವರಪುರಂ– ಬೆಳಗ್ಗೆ 7.45.
- **ವೇದಾಂತ ಸತ್ಸಂಗ ಕೇಂದ್ರ:** ಡಾ. ಕೆ.ಜಿ.ಸುಬ್ರಾಯಶರ್ಮಾರಿಂದ 'ಸ್ಥಾನದ್ವಯಂ' ಕುರಿತು ಉಪನ್ಯಾಸ, ಸ್ಥಳ: ವೇದಾಂತ ನಿಲಯ, ಸಾಕಮ್ಮ ಗಾರ್ಡನ್, ಬಸವನಗುಡಿ– ಬೆಳಗ್ಗೆ 9.
- **ಬಿಎನ್‌ಎಂ ಇನ್‌ಸ್ಟ್ಯೂಟ್ ಆಫ್ ಟೆಕ್ನಾಲಜಿ:** ಸಂಸ್ಥಾಪಕರ ದಿನಾಚರಣೆ ಅಧ್ಯಕ್ಷತೆ– ಬಿಎನ್‌ಎಂಐಟಿ ಅಧ್ಯಕ್ಷ ಡಾ.ಜಿ.ನಾಗಣ್ಣ, ಸ್ಥಳ: ಸಂಸ್ಥೆಯ ಮಾತೃಶ್ರೀ ಸುಶೀಲ ದೇವಿ ಸಭಾಂಗಣ, ಬನಶಂಕರಿ 2ನೇ ಹಂತ, 12ನೇ ಮುಖ್ಯರಸ್ತೆ, 27ನೇ ಕ್ರಾಸ್– ಬೆಳಗ್ಗೆ 10.
- **ಜೆಎಸ್‌ಎಸ್ ಕಲಾಮಂಟಪ:** ಜೆಎಸ್‌ಎಸ್ ರಂಗೋತ್ಸವ, ಉದ್ಘಾಟನೆ– ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಜೆ.ಲೋಕೇಶ್, ಅಧ್ಯಕ್ಷತೆ– ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ನಗರದ ಘಟಕದ ಅಧ್ಯಕ್ಷ ಕೆ.ವಿ.ನಾಗರಾಜಮೂರ್ತಿ, ಸ್ಥಳ: ಶಿವರಾತ್ರೀಶ್ವರ ಕೇಂದ್ರ, ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಸಮುಚ್ಛಯ, 8ನೇ ಬ್ಲಾಕ್, ಜಯನಗರ– ಬೆಳಗ್ಗೆ 10.30.
- **ಇನ್ಫರ್ಮೇಶನ್ ಆ್ಯಂಡ್ ರಿಸೋರ್ಸ್ ಸೆಂಟರ್:** ಕಲಾಗಾನ ಸಾಂಸ್ಕೃತಿಕ ಉತ್ಸವ, ಸ್ಥಳ: ವಿದ್ಯಾ ವಿಹಾರ ಹಾಲ್, ಪಂಪ ಮಹಾಕವಿ ರಸ್ತೆ– ಬೆಳಗ್ಗೆ 11.
- **ವಿಶ್ವ ವೀರಶೈವ ಸಂಸ್ಕೃತಿ ಪ್ರತಿಷ್ಠಾನ:** ಕನ್ನಡ ರಾಜ್ಯೋತ್ಸವದ ಅಂಗವಾಗಿ ಸಾಧಕರಿಗೆ ಪ್ರಶಸ್ತಿ ಪ್ರದಾನ, ಉದ್ಘಾಟನೆ–ಕೇಂದ್ರ ಮಾಜಿ ಸಚಿವ ಎಂ.ವಿ.ರಾಜಶೇಖರನ್, ಅಧ್ಯಕ್ಷತೆ– ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಅರಳಿ ನಾಗರಾಜ್, ಸ್ಥಳ: ನಯನ ಸಭಾಂಗಣ, ಕನ್ನಡ ಭವನ– ಮಧ್ಯಾಹ್ನ 2.30.
- **ಎಸ್‌ಜಿಬಿ ಮತ್ತು ಬಿಜಿಎಸ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್:** ಬಿಜಿಎಸ್ ಉತ್ತರ ಸಮಾರೋಪ, ಸಾನಿಧ್ಯ –ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್‌ನ ಅಧ್ಯಕ್ಷ ಡಾ.ನಿರ್ಮಲಾನಂದನಾಥ ಸ್ವಾಮೀಜಿ, ಬಹುಮಾನ ವಿತರಣೆ– ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲಗೌಡ, ಮುಖ್ಯ ಅತಿಥಿ–ನಗರ ಪೊಲೀಸ್ ಆಯುಕ್ತ ಟಿ.ಸುನೀಲ್‌ಕುಮಾರ್, ಸ್ಥಳ: ಬಿಜಿಎಸ್ ಹೆಲ್ತ್ ಅಂಡ್ ಎಜ್ಯುಕೇಷನ್ ಸಿಟಿ ಕ್ಯಾಂಪಸ್, ಕೆಂಗೇರಿ– ಮಧ್ಯಾಹ್ನ 3.30.
- **ದಿ ಮಿಥಿಕ್ ಸೊಸೈಟಿ:** ಆಲೂರು ವೆಂಕಟರಾಯರ ಕರ್ನಾಟಕ ಗತವೈಭವ ಗ್ರಂಥದ ಶತಮಾನೋತ್ಸವ, ಉದ್ಘಾಟನೆ– ಕರ್ನಾಟಕ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಡಾ.ಶ್ರೀನಿವಾಸ ಪಾಡಿಗಾರ, ಅಧ್ಯಕ್ಷತೆ– ಹಿರಿಯ ಸಂಶೋಧಕ ಡಾ.ಎಂ.ಚಿದಾನಂದಮೂರ್ತಿ, ಸ್ಥಳ: ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ– ಸಂಜೆ 5.30.
- **ಕೋಟೆ ಕಲಾ ಅಕಾಡೆಮಿ ಟ್ರಸ್ಟ್:** 21ನೇ ಬ್ಯಾಚ್ ರಂಗ ವಿದ್ಯಾರ್ಥಿಗಳ ಬೀಳ್ಕೊಡುಗೆ, ಉದ್ಘಾಟನೆ– ನಟ ಅವಿನಾಶ್, ಅಧ್ಯಕ್ಷತೆ– ಪತ್ರಕರ್ತ ಗಣೇಶ್ ಕಾಸರಗೋಡು, ಸ್ಥಳ: ರವೀಂದ್ರ ಕಲಾಕ್ಷೇತ್ರ– ಸಂಜೆ 5.30.
- **ಬೆಂಗಳೂರು ಗಾಯನ ಸಮಾಜ:** ಯುವ ಸಂಗೀತೋತ್ಸವ, ವಿದುಷಿ ಮೇಘನಾ ಮೂರ್ತಿ ಅವರಿಂದ ಗಾಯನ, ಸ್ಥಳ: ಗಾಯನ ಸಮಾಜ, ಕೆ.ಆರ್. ರಸ್ತೆ– ಸಂಜೆ 6.

- **ಶೇಷಾದ್ರಿಪುರಂ ಪದವಿ ಪೂರ್ವ ಕಾಲೇಜು:** ರಜತ ಕಲಾ ವೈಭವ ಅಂಗವಾಗಿ ಕನ್ನಡ ರಾಜ್ಯೋತ್ಸವ ಹಾಗೂ ವಿವಿಧ ಸಾಂಸ್ಕೃತಿಕ ಸ್ಪರ್ಧೆ, ಅಧ್ಯಕ್ಷತೆ– ಶೇಷಾದ್ರಿಪುರಂ ಶಿಕ್ಷಣ ದತ್ತಿ ಗೌರವ ಜಂಟಿ ಕಾರ್ಯದರ್ಶಿ ಸರೋಜ ನಂಜಪ್ಪ, ಮುಖ್ಯ ಅತಿಥಿ– ನಟ ನಾಗರಾಜ ಕೋಟೆ, ಸ್ಥಳ: ಕಾಲೇಜಿನ ಸಭಾಂಗಣ, ಯಲಹಂಕ ಉಪನಗರ– ಬೆಳಗ್ಗೆ 10.